ಪರಾತ್ಪರ ಗುರು ಡಾ. ಆಠವಲೆಯುವರ ಅಮೂಲ್ಯ ವಿಚಾರ : ಖಂಡ ೨

# ಹಿಂದೂ ರಾಷ್ಟ್ರದ ಸ್ಥಾಪನೆಯ ದಿಶೆ

(Direction on establishing the 'Hindu Nation')

ಕನ್ನಡ (Kannada)

ಸಂಕಲನಕಾರರು

**ಶ್ರೀ. ಚೇತನ ಧನಂಜಯ ರಾಜಹಂಸ**

(ವಕ್ತಾರರು, ಸನಾತನ ಸಂಸ್ಥೆ)

**ಸನಾತನ ಸಂಸ್ಥೆ**

ಮೇ ೨೦೨೩ ರವರೆಗೆ ಸನಾತನದ ೩೬೨ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೩,೬೧,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಶ್ರೀ. ಅಜಯ ಪಿಂಗಳೆ ಮತ್ತು ಸೌ. ಅನಘಾ ಟಂಕಸಾಳೆ

**First Edition** : Narasimha Jayanthi, Kaliyug Varsh 5118
(20th May 2016)

**First Edition**
**Fourth Reprint** : Gurupurnime, Kaliyug Varsh 5125
(3rd July 2023)

Translated from the original Marathi text 'Hindu Rashtrachya Sthapanechi Disha'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ತೆಲುಗು ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಕು. ರಶ್ಮಿ ನಾಯಕ್
ಶ್ರೀ. ಗಣೇಶ ರಾಜಾರಾಮ ಕಾಮತ್


**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 70/-

**ISBN :** 978-93-84460-81-5 ॐ ಗ್ರಂಥ ಕ್ರ. : 279

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ 'ಸನಾತನ ಸಂಸ್ಥೆ'ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ 'ಗುರುಕೃಪಾಯೋಗ' ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೧೦.೫.೨೦೨೩ ರವರೆಗೆ ೧೨೪ ಸಾಧಕರು ಸಂತರಾಗಿದ್ದು, ೧,೦೯೧ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದ ಸಂಸ್ಥಾಪಕ–ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ 'www.Sanatan.org/Kannada')**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996

# ಗ್ರಂಥದ ಸಂಕಲನಕಾರರ ಪರಿಚಯ



**ಶ್ರೀ. ಚೇತನ ರಾಜಹಂಸ (ವಕ್ತಾರರು, ಸನಾತನ ಸಂಸ್ಥೆ)**

ಇವರಿಗೆ 'ಸನಾತನ ಧರ್ಮವೀರ' ಎಂಬ ಬಿರುದು ನೀಡಿ ಸನ್ಮಾನಿಸಲಾಗಿದ್ದು, ವಿವಿಧ ದೂರಚಿತ್ರವಾಹಿನಿಗಳಲ್ಲಿ ಹಿಂದೂ ಧರ್ಮದ ಪರವಾಗಿ ಮಾತನಾಡುತ್ತಾರೆ. ಸನಾತನದ ಗ್ರಂಥಗಳ ಸಂಕಲನ ಮತ್ತು ಹಿಂದೂಸಂಘಟನೆಗಾಗಿ ಪ್ರವಾಸ ಮಾಡುತ್ತಾರೆ. ಗೋವಾದಲ್ಲಿನ 'ಅಖಿಲ ಭಾರತೀಯ ಹಿಂದೂ ಅಧಿವೇಶನ'ದ ಆಯೋಜನೆಯಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

---

## ಗ್ರಂಥದ ಅನುಕ್ರಮಣಿಕೆ


| | | |
|---|---|---|
| ಅಧ್ಯಾಯ ೧ | : 'ಹಿಂದೂ ರಾಷ್ಟ್ರ' : ಮೂಲಭೂತ ವಿಚಾರ | ೮ |
| ಅಧ್ಯಾಯ ೨ | : ಹಿಂದೂ ರಾಷ್ಟ್ರದ ಸ್ಥಾಪನೆಯ ದೃಷ್ಟಿಯಿಂದ ಸಾಧನೆಯ ಮಹತ್ವ | ೧೭ |
| ಅಧ್ಯಾಯ ೩ | : ಹಿಂದೂ ರಾಷ್ಟ್ರದ ಸ್ಥಾಪನೆಯ ದೃಷ್ಟಿಯಿಂದ ಬ್ರಾಹ್ಮತೇಜದ (ಆಧ್ಯಾತ್ಮಿಕ ಬಲದ) ಮಹತ್ವ | ೨೮ |
| ಅಧ್ಯಾಯ ೪ | : ಹಿಂದೂ ರಾಷ್ಟ್ರದ ನಿರ್ಮಿತಿಯ ಅನಿವಾರ್ಯ ಪ್ರಕ್ರಿಯೆ : ಸೂಕ್ಷ್ಮದಲ್ಲಿನ 'ದೇವಾಸುರರ ಯುದ್ಧ' ! | ೩೩ |
| ಅಧ್ಯಾಯ ೫ | : ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಾಂಪ್ರದಾಯಿಕ ಐಕ್ಯತೆಯ ಆವಶ್ಯಕತೆ | ೪೦ |
| ಅಧ್ಯಾಯ ೬ | : ಹಿಂದುತ್ವನಿಷ್ಠ ಸಂಘಟನೆಗಳು ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಒಟ್ಟಾಗಿ ಕಾರ್ಯ ಮಾಡುವ ದಿಶೆ ! | ೪೨ |
| ಅಧ್ಯಾಯ ೭ | : ಹಿಂದೂ ರಾಷ್ಟ್ರದ ಸ್ಥಾಪನೆಯಲ್ಲಿ ವಿಚಾರವಂತರ ಮಹತ್ವ | ೪೬ |
| ಅಧ್ಯಾಯ ೮ | : ಹಿಂದೂ ರಾಷ್ಟ್ರದ ಸ್ಥಾಪನೆಯ ಪ್ರತ್ಯಕ್ಷ ಕಾರ್ಯ | ೫೦ |
| ಅಧ್ಯಾಯ ೯ | : ಹಿಂದೂ ರಾಷ್ಟ್ರದ ಸ್ಥಾಪನೆಯ ಮುಂಬರುವ ಕಾಲದ ಕಾರ್ಯದ ದಿಶೆ | ೬೧ |
| ಅಧ್ಯಾಯ ೧೦ | : ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯದಲ್ಲಿ ಸಹಭಾಗಿಯಾಗಿರಿ ! | ೬೫ |

## ಮನೋಗತ

ಹಿಂದೂ ಧರ್ಮದ ಮತ್ತು ಭಾರತವರ್ಷದ ವೈಶಿಷ್ಟ್ಯವೆಂದರೆ, ಇಲ್ಲಿ ಭವಿಷ್ಯದಲ್ಲಿ ಘಟಿಸುವ ಅದ್ವಿತೀಯ ಘಟನೆಗಳನ್ನು ಅವು ಘಟಿಸುವ ಮೊದಲೇ ಹೇಳಲಾಗುತ್ತದೆ. ವಾಲ್ಮೀಕಿ ಋಷಿಗಳು ತಮ್ಮ ಅಲೌಕಿಕ ಪ್ರತಿಭಾದೃಷ್ಟಿಯಿಂದ ಮೊದಲು ರಾಮಾಯಣ ವನ್ನು ರಚಿಸಿದರು. ನಂತರ ಪ್ರಭು ಶ್ರೀರಾಮನ ಅವತಾರವಾಗಿ ಐತಿಹಾಸಿಕ 'ರಾಮರಾಜ್ಯ' ಭೂತಲದಲ್ಲಿ ಅವತರಿಸಿತು. ಭಗವಾನ್ ಶ್ರೀಕೃಷ್ಣನು ಜನಿಸುವ ಮೊದಲೂ ದೈವೀ ಅಶರೀರವಾಣಿಯಾಯಿತು. ಅಶರೀರವಾಣಿಗನುಸಾರ ಜನಿಸಿದ ಭಗವಾನ್ ಶ್ರೀಕೃಷ್ಣನು ಧರ್ಮಸಂಸ್ಥಾಪನೆ ಮಾಡಿದನು ಮತ್ತು ಪೃಥ್ವಿಯ ಮೇಲೆ ಪುನಃ 'ಧರ್ಮರಾಜ್ಯ' ಅವತರಿಸಿತು. ಅಧ್ಯಾತ್ಮದಲ್ಲಿನ ಅಧಿಕಾರಿ ವ್ಯಕ್ತಿಯಾದ ಪರಾತ್ಪರ ಗುರು ಡಾ. ಆಠವಲೆ ಯವರು ಮೊತ್ತಮೊದಲು ೧೯೯೮ ರಲ್ಲಿ 'ಭಾರತದಲ್ಲಿ ೨೦೨೫ ರ ನಂತರ 'ಈಶ್ವರೀ ರಾಜ್ಯ' ಅಂದರೆ 'ಹಿಂದೂ ರಾಷ್ಟ್ರ'ದ ಸ್ಥಾಪನೆಯಾಗುವುದು' ಎಂಬ ವಿಚಾರವನ್ನು ದಾರ್ಶನಿಕತೆಯಿಂದ ಮಂಡಿಸಿದ್ದರು. ಆಗಿನಿಂದಲೇ ಅವರು 'ಹಿಂದೂ ರಾಷ್ಟ್ರ'ದ ಬಗ್ಗೆ ಸತತ ವೈಚಾರಿಕ ಮತ್ತು ಆಧ್ಯಾತ್ಮಿಕ ಸ್ತರದಲ್ಲಿ ಲೇಖನಗಳನ್ನು ಬರೆಯುತ್ತಿದ್ದಾರೆ. ಈ ವಿಚಾರಗಳಲ್ಲಿ ಮುಂಬರುವ ಕಾಲದಲ್ಲಿ ಅಗಬೇಕಾದ ಆದರ್ಶ ರಾಷ್ಟ್ರರಚನೆ, ಅಂದರೆ ಧರ್ಮಸಂಸ್ಥಾಪನೆಯ ಬೀಜವನ್ನು ಬಿತ್ತಿದ್ದಾರೆ. ಹಿಂದೂ ರಾಷ್ಟ್ರದ ಸ್ಥಾಪನೆಯ ಯಾವುದೇ ಆಶಾದಾಯಕ ಘಟನೆಗಳು ಸ್ಥೂಲದಲ್ಲಿ ಘಟಿಸದಿರುವಾಗ 'ಹಿಂದೂ ರಾಷ್ಟ್ರ'ದ ಬಗ್ಗೆ ಹೇಳುವುದು ಕೆಲವರಿಗೆ ಅತಿಶಯೋಕ್ತಿಯೆನಿಸಬಹುದು; ಆದರೆ ಕಾಲದ ಹೆಜ್ಜೆಗಳನ್ನು ಗುರುತಿಸಬಲ್ಲ ಸಂತರಿಗೆ ಆ ಉಜ್ವಲ ಭವಿಷ್ಯದ ಪೂರ್ವಸೂಚನೆ ಸಿಕ್ಕಿದೆ. ನಾವು ಆ ದಿಶೆಯಲ್ಲಿ ಪ್ರಯತ್ನಿಸುವುದು ನಮ್ಮ ಸಾಧನೆಯಾಗಿದೆ.

ಪರಾತ್ಪರ ಗುರು ಡಾ. ಆಠವಲೆಯವರು ಆಗಾಗ 'ಹಿಂದೂ ರಾಷ್ಟ್ರ'ದ ವಿಷಯದಲ್ಲಿ ಬರೆದ ಒಟ್ಟು ವಿಚಾರಗಳ ಪೈಕಿ ಕೇವಲ ಹಿಂದೂ ರಾಷ್ಟ್ರದ ಸ್ಥಾಪನೆಗೆ ದಿಶೆ ನೀಡುವ ವಿಚಾರಗಳನ್ನು ಮಾತ್ರ ಈ ಗ್ರಂಥದಲ್ಲಿ ಸೇರಿಸಲಾಗಿದೆ. ಈ ಗ್ರಂಥವೆಂದರೆ ಪರಾತ್ಪರ ಗುರು ಡಾ. ಆಠವಲೆಯವರ ವಿಚಾರಸಂಗ್ರಹವಾಗಿದ್ದು ಅದರಲ್ಲಿ ಅವರ ಚಿಕ್ಕ ಲೇಖನ ಮತ್ತು ದೊಡ್ಡ ಲೇಖನಗಳೆರಡನ್ನೂ ಸೇರಿಸಲಾಗಿದೆ. 'ಹಿಂದೂ ರಾಷ್ಟ್ರ' ಎಂಬ ಶಬ್ದದ ವ್ಯಾಖ್ಯೆಯನ್ನು ಅನೇಕ ವಿಚಾರವಂತರು ಭೂಗೋಳ, ಇತಿಹಾಸ, ಸಂಸ್ಕೃತಿ ಮತ್ತು ತತ್ತ್ವಜ್ಞಾನದ ಆಧಾರದಲ್ಲಿ ಮಾಡಿದ್ದಾರೆ. ಪರಾತ್ಪರ ಗುರು ಡಾ. ಆಠವಲೆಯವರು 'ಹಿಂದೂ ರಾಷ್ಟ್ರ'ದ ವಿಷಯವನ್ನು ಆಧ್ಯಾತ್ಮಿಕ ದೃಷ್ಟಿಕೋನದಿಂದ ಮಂಡಿಸಿದ್ದಾರೆ. ವಿಶ್ವಕಲ್ಯಾಣದ ವ್ಯಾಪಕ ಆಧ್ಯಾತ್ಮಿಕ ಬೋಧನೆಯನ್ನು ನೀಡುವ ಭಾರತದಲ್ಲಿ ಮಾತ್ರವಲ್ಲ, ಪೃಥ್ವಿಯ ಮೇಲೆ ಎಲ್ಲೆಡೆ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸುವುದು ಒಂದು ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ ಎಂಬುದು ಈ ಗ್ರಂಥದಿಂದ ಸಹಜವಾಗಿ ಅರಿವಾಗುವುದು.

ಸ್ವಾತಂತ್ರ್ಯವೀರ ಸಾವರಕರ, ಆದ್ಯ ಸರಸಂಘಚಾಲಕರಾದ ಡಾ. ಹೆಡಗೇವಾರ, ಪೂ. ಗೋಳವಲಕರ ಗುರೂಜಿ ಮುಂತಾದ ಶ್ರೇಷ್ಠ ಪುರುಷರೂ ಹಿಂದೂ ರಾಷ್ಟ್ರದ ವಿಚಾರವನ್ನು ಪ್ರಖರವಾಗಿ ಮಂಡಿಸಿದ್ದರು. ಸ್ವಯಂಭೂ ಹಿಂದೂ ರಾಷ್ಟ್ರವಾಗಿದ್ದ ಭಾರತವರ್ಷವು ಸ್ವಾತಂತ್ರ್ಯಪ್ರಾಪ್ತಿಯ ನಂತರ ದುರ್ದೈವದಿಂದ ಜಾತ್ಯತೀತ ರಾಷ್ಟ್ರ ವಾಯಿತು ಮತ್ತು 'ಹಿಂದೂ ರಾಷ್ಟ್ರ'ದ ತೇಜಸ್ವಿ ಸಂಕಲ್ಪನೆಯು ಮುಚ್ಚಿಹೋಯಿತು. 'ರಾಮರಾಜ್ಯ' ಪ್ರತ್ಯಕ್ಷ ಅವತರಿಸಿದ್ದರೂ, ಆ ರಾಜ್ಯವನ್ನು ಇಂದು ದಂತಕಥೆ ಎಂದು ಹೇಳಲಾಗುತ್ತಿದೆ. ಛತ್ರಪತಿ ಶಿವಾಜಿ ಮಹಾರಾಜರು ಸ್ಥಾಪಿಸಿದ 'ಹಿಂದವೀ ಸ್ವರಾಜ್ಯ' ಅಂದರೆ, 'ಹಿಂದೂ ರಾಷ್ಟ್ರ'ವನ್ನು ಮರೆಸುತ್ತಾ ಅದಕ್ಕೆ 'ಜಾತ್ಯತೀತ ರಾಜ್ಯ'ದ ಹೆಸರಿನಡಿ ಯಲ್ಲಿ 'ಹಸಿರು ಬಣ್ಣ' ಬಳಿಯುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಅದಕ್ಕಿಂತಲೂ ಮುಂದೆ ಹೋಗಿ 'ಹಿಂದೂ ರಾಷ್ಟ್ರವೆಂದರೆ ಮತಾಂಧತೆ' ಎಂದು ಬೇಕೆಂದೇ ಅಪಪ್ರಚಾರ ಮಾಡಲಾಗುತ್ತಿದೆ. ಈ ಜಾತ್ಯತೀತತೆಯಿಂದಾಗಿ ದೇಶದಲ್ಲಿ ಅಸಂಖ್ಯಾತ ಸಮಸ್ಯೆಗಳು ನಿರ್ಮಾಣವಾಗಿದ್ದರೂ ಜಾತ್ಯತೀತತೆಯ ಬಗ್ಗೆ ಅಂಧಶ್ರದ್ಧೆ ಇರುವುದರಿಂದ ಈಗಲೂ ಅವರಿಗೆ ಭಾರತ 'ಜಾತ್ಯತೀತ ರಾಷ್ಟ್ರ'ವಾಗಿರಬೇಕೆಂದು ಅನಿಸುತ್ತದೆ. 'ಹಿಂದೂ ರಾಷ್ಟ್ರ'ದ ವಿಷಯಕ್ಕೆ ಅವರು ಯಾವುದೇ ಮಹತ್ವ ನೀಡಿಲ್ಲ. ಅವರಿಗೆ ಈಗ 'ಜಾತ್ಯತೀತ ರಾಜ್ಯ'ವೋ ಅಥವಾ 'ಹಿಂದೂ ರಾಜ್ಯ'ವೋ ಎಂಬುದು ನಿಜವಾದ ಪ್ರಶ್ನೆಯಾಗಿರದೇ 'ಇಸ್ಲಾಮಿ ರಾಜ್ಯವೋ ಅಥವಾ 'ಹಿಂದೂ ರಾಜ್ಯ'ವೋ ? ಎಂಬ ಪ್ರಶ್ನೆಯು ಮುಂಬರುವ ಕೆಲವು ವರ್ಷಗಳಲ್ಲಿ ಉದ್ಭವಿಸಲಿದೆ ಎಂಬುದು ತಿಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಹಿಂದೂಸಂಘಟನೆ ಮಾಡುವ ವಿಚಾರಧಾರೆಯೇ ಈ ದೇಶದ ರಕ್ಷಣೆ ಮತ್ತು ಹಿಂದೂ ರಾಷ್ಟ್ರದ ನಿರ್ಮಾಣವನ್ನು ಮಾಡಬಲ್ಲದು. ಹಿಂದೂ ರಾಷ್ಟ್ರದ ಆಕಾಂಕ್ಷೆ ಸಫಲವಾಗಲು ಹಿಂದೂ ಸಮಾಜದಲ್ಲಿ ಹಿಂದೂ ರಾಷ್ಟ್ರದ ಬಗೆಗಿನ ವಿಚಾರ, ಉಚ್ಚಾರ ಮತ್ತು ಆಚಾರವು ಎಲ್ಲೆಡೆ ಒಂದೇ ರೀತಿ ಕಾಣಿಸಬೇಕು. ಆದ್ದರಿಂದಲೇ 'ಹಿಂದೂ ಸಮಾಜದ ವಿವಿಧ ಘಟಕಗಳು, ಉದಾ. ಹಿಂದೂ ಸಂಘಟನೆಗಳು, ಸಂಪ್ರದಾಯಗಳು, ಸಂತರು, ನ್ಯಾಯವಾದಿ ಗಳು, ವಿಚಾರವಂತರು ಮುಂತಾದವರು 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಲು ಹೇಗೆ ಪ್ರಯತ್ನಿಸಬೇಕು' ಎಂಬುದರ ಬಗೆಗಿನ ಮಾರ್ಗದರ್ಶನ ಈ ಗ್ರಂಥದಲ್ಲಿ ಮಾಡಲಾಗಿದೆ.

ಪರಾತ್ಪರ ಗುರು ಡಾ. ಆಠವಲೆಯವರ ಪ್ರೇರಣಾದಾಯಕ ವಿಚಾರಗಳಿಂದ ಸ್ಫೂರ್ತಿ ಪಡೆದು ಮುಂಬರುವ ಕಾಲದಲ್ಲಿ ಹಿಂದೂ ಸಮಾಜಕ್ಕೆ ಭಾರತಭೂಮಿಯಲ್ಲಿ ರಾಮ ರಾಜ್ಯದ ಅನುಭೂತಿಯನ್ನು ನೀಡುವ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸಲು ಅಳಿಲುಸೇವೆ ಯಲ್ಲ, ಹನುಮಂತನಂತಹ ಸೇವೆ ನಿರ್ವಹಿಸುವ ಪ್ರೇರಣೆ ಸಿಗಬೇಕು ಮತ್ತು ಅವರು ಈ ಕಾರ್ಯಕ್ಕಾಗಿ ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸ್ತರದಲ್ಲಿ ಎಡೆಬಿಡದೆ ಶ್ರಮಿಸಬೇಕು ಎಂದು ಪ್ರಭು ಶ್ರೀರಾಮನ ಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**